ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಹಗರಣ

260 (293), ಶ್ರೀ ಜಗದೀಶ್ ಕುಮಾರ ಆರ್. (ಹೆಬ್ಬಾಳ)

ಅ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಕಳೆದ 2009 ರಿಂದ 2012ರ ವರೆಗೆ ಲೆಕ್ಕ ಪರಿಶೋಧಕರ ವರದಿಯಂತೆ (ಸಿ.ಎ.ಜಿ. ವರದಿ) ಅಂತರ್ಜಾಲದಲ್ಲಿ ಪ್ರಶ್ನೆಪತ್ರಿಕೆ ವಿತರಣೆ ಹಾಗೂ ಗಣಕೀಕೃತ ಮೌಲ್ಯಮಾಪನದಲ್ಲಿ ಕರ್ನಾಟಕ ಪಾರದರ್ಶಕ ಕಾಯ್ದೆ ಅಧಿನಿಯಮ–2000 (ಕೆಟಿಪಿಪಿ ಕಾಯ್ದೆ–2000) ಯನ್ನು ಉಲ್ಲಂಘಿಸಿ ಬಹುಕೋಟಿ ಹಗರಣ ವರದಿಯಾಗಿದ್ದರೂ ಈವರೆಗೂ ಸರ್ಕಾರ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು;

ಆ) ಕಟ್ಟಡ ಕಾಮಗಾರಿ, ಗುತ್ತಿಗೆ ಕೆಲಸಗಳಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000 ನಿಯಮ ಉಲ್ಲಂಘಿಸಿ ವಿಶ್ವವಿದ್ಯಾನಿಲಯದ ಬೊಕ್ಕಸಕ್ಕೆ ನೂರಾರು ಕೋಟಿ ರೂಪಾಯಿಗಳು ನಷ್ಟ ಎಂದು 2009–2012ರ ಸಿ.ಎ.ಜಿ. ವರದಿಯಲ್ಲೂ ಉಲ್ಲೇಖವಾಗಿದ್ದರೂ ಈವರೆಗೂ ಸರ್ಕಾರ ಯಾವುದೇ ಕ್ರಮವನ್ನು ಕೈಗೊಳ್ಳದಿರುವುದಕ್ಕೆ ಕಾರಣವೇನು;

ಇ) ಕುಲಪತಿಯವರ ಅಧಿಕಾರ ಅವಧಿಯ ಕೊನೆಯಲ್ಲಿ ಭಾರತೀಯ ಸಂಹಿತೆ 371(ಜೆ) ಅಧಿಸೂಚನೆ ಹಾಗೂ ಸರ್ಕಾರದ ಸೂಚನೆ ಮೀರಿ ಅಧ್ಯಾಪಕರ ನೇಮಕಾತಿಯನ್ನು ಮಾಡಿರುವ ಬಗ್ಗೆ ಮತ್ತು ಸದರಿ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಕುರಿತು ಹಾಗೂ ಮುಂದಿನ ಕ್ರಮ ಜರುಗಿಸಬೇಕೆಂದು ಜಿ.ವಿ.ಕೃಷ್ಣರಾವ್ ಸಮಿತಿಯು ನೀಡಿರುವ ವರದಿಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು;

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಪ್ರಶ್ನೆ ಪತ್ರಿಕೆ ವಿತರಣೆ ಹಾಗೂ ಗಣಕೀಕೃತ ಮೌಲ್ಯಮಾಪನದ ಕೆಲಸವನ್ನು ಕರ್ನಾಟಕ ಪಾರದರ್ಶಕ ಅಧಿನಿಯಮ 1999ರನ್ವಯ ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ: VTU/SAP/Exam/T-

139/2011-12/413, ದಿನಾಂಕ:27.04.2011 ಮತ್ತು ದಿನಾಂಕ:28.04.2011 ರಂದು ಟೆಂಡರ್ ಕರೆದು ನಿಯಮಾನುಸಾರ ಈ ಕೆಲಸವನ್ನು ಗುತ್ತಿಗೆ ನೀಡಲಾಗಿದೆ. ವಿಶ್ವವಿದ್ಯಾಲಯದಿಂದ ದಾಖಲೆಗಳನ್ನು ಹಾಗೂ ಅನುಸರಣಾವರದಿಯನ್ನು ಮಹಾಲೇಖಪಾಲರು, ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ.

ಆ) ವಿಶ್ವವಿದ್ಯಾಲಯದಲ್ಲಿ ಕಳೆದ 2009 ರಿಂದ 2012 ರವರೆಗಿನ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಿಸಿದ ವರದಿಗಳಿಗೆ ಈಗಾಗಲೇ ಜನವರಿ 2013 ರಲ್ಲಿ ಉತ್ತರಗಳನ್ನು ಮಹಾಲೇಖಪಾಲರು, ಬೆಂಗಳೂರು ಇವರಿಗೆ ವಿಶ್ವವಿದ್ಯಾಲಯವು ಸಲ್ಲಿಸಿದೆ.

ಇ) ಭಾರತೀಯ ಸಂಹಿತೆ 371(ಜೆ) ಅಧಿಸೂಚನೆ ಹಾಗೂ ಸರ್ಕಾರದ ಸೂಚನೆ ಮೀರಿ ಅಧ್ಯಾಪಕರ ನೇಮಕಾತಿ ಮಾಡಿರುವ ಬಗ್ಗೆ ಸಚಿವ ಸಂಪುಟ ಉಪ ಸಮಿತಿಯ ಪರಿಶೀಲನೆಯಲ್ಲಿದೆ. ಶ್ರೀ ಜಿ. ವಿ. ಕೃಷ್ಣರಾವ್ ಸಮಿತಿಯ ವರದಿಯು ಉನ್ನತ ಶಿಕ್ಷಣ ಇಲಾಖೆಗೆ ಬಂದಿರುವುದಿಲ್ಲ.

ಮೂಲಭೂತ ಸೌಕರ್ಯಗಳ ಮಾಹಿತಿ

261 (294), ಶ್ರೀ ಜಗದೀಶ್ ಕುಮಾರ ಆರ್. (ಹೆಬ್ಬಾಳ)

ಅ) ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಜೆ.ಸಿ.ನಗರ ವಾರ್ಡಿನಲ್ಲಿ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಉರ್ದು ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಕಳೆದ ಮೂರು ವರ್ಷಗಳಿಂದ ಸದರಿ ಶಾಲಾ ಕಾಲೇಜುಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು; (ಪ್ರತ್ಯೇಕ ಕಾಮಗಾರಿವಾರು ವಿವರ ಒದಗಿಸುವುದು);